





ಕೊಳ್ಳುತ್ತದೆ. ಕಾರಣ ಕಾಳಿ ನದಿಯ ನೀರಿನ ಮಟ್ಟ ಹೆಚ್ಚಿರುತ್ತದೆ.

ನಾವು ನೋಡಬೇಕಾದ ವಜ್ರ ಜಲಪಾತದ ಬಗ್ಗೆ ಮಧುಕರ್ ಮತ್ತು ಕಾಶೀನಾಥ್ ಅವರಲ್ಲಿ ತಿಳಿಸಿದೆವು. ನಾವು ಗ್ರಾಮ ತಲುಪಿದಾಗ ಸಮಯ ಎರಡು ಗಂಟೆಯಾಗಿತ್ತು. ಆದ್ದರಿಂದ ನಮ್ಮ ಕಾರ್ಯಕ್ರಮವನ್ನು ಮೂರನೆಯ ದಿನಕ್ಕೆ ಮುಂದೂಡಿದರು. ಅಷ್ಟರಲ್ಲೇ ಅವರ ಇಬ್ಬರು ಮಕ್ಕಳು ನಮ್ಮ ನೆಚ್ಚಿನ ಸ್ನೇಹಿತರಾಗಿದ್ದರು.

ಮಾರನೆಯ ದಿನ ವಜ್ರ ಜಲಪಾತಕ್ಕೆ ಹೋಗಲು ತಯಾರಾದೆವು. ಬೆಳಿಗ್ಗೆಯ ಉಪಹಾರ ನೀರುದೋಸೆ ಮತ್ತು ಬೆಲ್ಲದ ಪಾಕ! ನಿಜಕ್ಕೂ ಅದ್ಭುತ ರುಚಿ! ಬೆಂಗಳೂರಿನಲ್ಲಿ ಸಿಕ್ಕಿದ್ದೆಲ್ಲ ತಿಂದೋ ಏನೋ ನಮಗೆ ಇದು ಒಂದು ತರಹ ಹೊಸ ರುಚಿ. ನಮ್ಮ ಜೊತೆ ಮಾರುತಿ ಎಂಬವರನ್ನು ಜಲಪಾತ ತೋರಿಸಲು ಕಳಿಸಿದರು.

ವಜ್ರ ಜಲಪಾತ ತಲುಪಲು ದೇವಕಾರದಿಂದ 4 ಕಿ.ಮೀ. ಕಾಡಿನಲ್ಲಿ ನಡೆಯಬೇಕು. ಸ್ವಲ್ಪ ಕಠಿಣವಾದ ಹಾದಿ, ಇದು ದಾಂಡೇಲಿ ರಕ್ಷಿತಾ ಅರಣ್ಯಕ್ಕೆ ಸೇರುತ್ತದೆ. ಇಲ್ಲಿ ಕಾಡು ಪ್ರಾಣಿಗಳೂ ಸಿಗುತ್ತವೆ. ಅದೂ ರಾತ್ರಿ ಸಮಯ ಎಂದು ನಮ್ಮ ಸ್ನೇಹಿತರಾದ ಮಾರುತಿಯವರು ತಿಳಿಸಿದರು.

ಜಲಪಾತಕ್ಕೆ ಒಂದು ಕಿ.ಮೀ. ಇದೆ ಎಂದಾಗಲೇ ಅದರ ಶಬ್ದ ಕೇಳಿಸುತ್ತದೆ. ದೂರದಲ್ಲಿ ಜಲಪಾತ ಕಾಣಿಸುತ್ತಾ ಇತ್ತು. ಅಲ್ಲಿದ್ದ ಹೆಬ್ಬಂಡೆಗಳನ್ನು ನೋಡಿದರೆ ಎದೆ ನಡುಗಿಸುವಂತಿತ್ತು. ಆದರೂ ಜಲಪಾತವನ್ನು ಹತ್ತಿರದಿಂದ ನೋಡುವ ಆಸೆಯಿಂದ ಆ ಬಂಡೆಗಳನ್ನು ಹತ್ತಿ ಮುಂದೆ ಹೋದೆವು. ಹತ್ತಿರ ಎಂದರೆ ಜಲಪಾತದಿಂದ 200 ಮೀಟರ್ ದೂರದ ತನಕ ಹೋಗಬಹುದು. ಆದರೆ ಹೋಗುವಾಗ ತುಂಬಾ ಎಚ್ಚರ ಅಗತ್ಯ. ಸ್ವಲ್ಪ ಎಚ್ಚರ ತಪ್ಪಿದರೂ ಮೂಳೆ ಮುರಿಯುವುದು ಖಚಿತ. ಅಂದರೆ ಇದರ ಹಾದಿ ವಜ್ರದಷ್ಟೇ ಕಠಿಣವಾಗಿದೆ.

ಇದು ಸುಮಾರು 350 ಅಡಿ ಎತ್ತರದಿಂದ ಧುಮುಕುತ್ತದೆ. ಸುತ್ತಲೂ ದಟ್ಟವಾದ ಅರಣ್ಯ. ಇದು ಒಂದೇ ಹಂತದಿಂದ ಬೀಳುವುದರಿಂದ ನೋಡಲು ತುಂಬಾ ಸುಂದರವಾಗಿದೆ. ಒಂದು ಸ್ವಲ್ಪವೂ ಮಾಲಿನ್ಯವೇ ಇಲ್ಲದ ಜಾಗದಲ್ಲಿ ಅದರ ಸೌಂದರ್ಯವನ್ನು ವರ್ಣಿಸಲು ಆಗುವುದಿಲ್ಲ. ಈ ಜಲಪಾತ ನೋಡಲು ಅಕ್ಟೋಬರ್‌ನಿಂದ ಜನವರಿ ತಿಂಗಳು ಸರಿಯಾದ ಸಮಯ. ಮಳೆಗಾಲದಲ್ಲಿ ಇಲ್ಲಿಗೆ ಹೋಗುವುದು ತುಂಬಾ ಕಷ್ಟ.

ಆದರೆ ಒಂದೇ ವ್ಯಥೆಯೆಂದರೆ, ಇಡೀ ದೇವಕಾರ ಗ್ರಾಮವನ್ನೇ ಖಾಲಿ ಮಾಡಿಸುತ್ತಾ ಇದ್ದಾರಂತೆ. ಕಾರಣ ಕೈಗಾ ಅಣು ಸ್ಥಾವರದ ವಿಕಿರಣದ ಭಯ. ಬಹುಶಃ ಇಷ್ಟು ಹೊತ್ತಿಗೆ ಈ ಊರು ಪೂರ್ತಿಯಾಗಿ ಖಾಲಿಯಾಗಿರಲೂಬಹುದು.

ಯಾವ ಜನ್ಮದ ಸಂಬಂಧವೋ ನಮಗೆ ದೇವಕಾರದಲ್ಲಿ ಉಳಿಯಲು ಅವಕಾಶ ಕೊಟ್ಟ ಮಧುಕರ್ ಮತ್ತು ಕಾಶೀನಾಥ್ ಸೋದರರನ್ನು ಮರೆಯಲು ಅಸಾಧ್ಯ. ದೇವಕಾರದಿಂದ ಹಿಂತಿರುಗುವಾಗ ನಮ್ಮ ಕಣ್ಣಂಚಲಿ ನೀರಿತ್ತು.